# ಕೃಷಿ ವಿಜ್ಞಾನ ಕೇಂದ್ರ, ಉತ್ತರ ಕನ್ನಡ , ಶಿರಸಿ

# ಶುಂಠಿ ಕೀಟಗಳು ಮತ್ತು ರೋಗಗಳು ಹಾಗೂ ಹತೋಟಿ ಕ್ರಮಗಳು

1. ಕಾಂಡ ಕೊರೆಯುವ ಹುಳು

**ಹಾನಿಯ ಲಕ್ಷಣಗಳು**

ಮರಿಹುಳುಗಳು ಹಸಿ ಕಾಂಡವನ್ನು ಸೇರಿ ಸುರಂಗವನ್ನು ಕೊರೆದು ತಿನ್ನುತ್ತದೆ. ಮಧ್ಯದ ಎಲೆಗಳ ಮೇಲೆ ಅಡ್ಡವಾಗಿ ಸಾಲಾದ ರಂದ್ರಗಳನ್ನು ಕಾಣಬಹುದು. ನಂತರ ಸುಳಿ ಒಣಗಿ ಸಾಯುವುದು. ತೂತುಗಳಿಂದ ಹಿಕ್ಕೆಗಳು ಹೊರ ಬರುತ್ತದೆ.

**ನಿರ್ವಹಣೆ**

ಎಲೆ ತಿನ್ನುವ ಹುಳು, ಕಾಂಡ ಕೊರೆಯುವ ಹುಳುವಿನ ಹತೋಟಿಗೆ 1.7 ಮಿ.ಲೀ ಡೈಮಿಥೋಯೇಟ್ 30 ಇ.ಸಿ. ಅಥವಾ 1 ಮಿ.ಲೀ. ಮೊನೋಕ್ರೋಟೋಫಾಸ್ 36 ಎಸ್.ಎಲ್. ಅಥವಾ 2 ಮಿ.ಲೀ. ಮೆಲಾಥಿಯಾನ್ 50 ಇ.ಸಿ. ಅಥವಾ 2 ಮಿ.ಲೀ. ಎಂಡೋಸಲ್ಫಾನ್ 35 ಇ.ಸಿ. ಪ್ರತಿ ಲೀಟರ್ ನೀರಿನಲ್ಲಿ ಸೇರಿಸಿ ಸಿಂಪಡಿಸಬೇಕು.

2. ಎಲೆ ತಿನ್ನುವ ಹುಳು

**ಹಾನಿಯ ಲಕ್ಷಣಗಳು**

ಮರಿಹುಳುಗಳು ಎಲೆಗಳನ್ನು ತಿಂದು ಹಾಳು ಮಾಡುತ್ತವೆ.

**ನಿರ್ವಹಣೆ**

ಎಲೆ ತಿನ್ನುವ ಹುಳು, ಕಾಂಡ ಕೊರೆಯುವ ಹುಳುವಿನ ಹತೋಟಿಗೆ 1.7 ಮಿ.ಲೀ ಡೈಮಿಥೋಯೇಟ್ 30 ಇ.ಸಿ. ಅಥವಾ 1 ಮಿ.ಲೀ. ಮೊನೋಕ್ರೋಟೋಫಾಸ್ 36 ಎಸ್.ಎಲ್. ಅಥವಾ 2 ಮಿ.ಲೀ. ಮೆಲಾಥಿಯಾನ್ 50 ಇ.ಸಿ. ಅಥವಾ 2 ಮಿ.ಲೀ. ಎಂಡೋಸಲ್ಫಾನ್ 35 ಇ.ಸಿ. ಪ್ರತಿ ಲೀಟರ್ ನೀರಿನಲ್ಲಿ ಸೇರಿಸಿ ಸಿಂಪಡಿಸಬೇಕು.

# ರೋಗಗಳು

1. ಎಲೆ ಚುಕ್ಕೆ ರೋಗ

**ರೋಗದ ಲಕ್ಷಣಗಳು**

ಸಣ್ಣನೆಯ ವೃತಾಕಾರದ ಅಥವಾ ಗೋಲಾಕಾರದ ತಿಳಿಹಳದಿ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ನಂತರ ಚುಕ್ಕೆಗಳು ವೃದ್ಧಿಗೊಂಡು ಆಮೇಲೆ ಎಲೆಗಳು ಒಣಗಲು ಪ್ರಾರಂಭವಾಗುತ್ತವೆ.

**ನಿರ್ವಹಣಾ ಕ್ರಮಗಳು**

ಎಲೆ ಚುಕ್ಕೆ ರೋಗವನ್ನು ತಡೆಗಟ್ಟಲು 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ 50 ಡಬ್ಲ್ಯು.ಪಿ. ಪ್ರತಿ ಲೀಟರ್ ನೀರಿನಲ್ಲಿ ಸೇರಿಸಿ ಸಿಂಪರಿಸಬೇಕು. ಎಲೆ ಚುಕ್ಕೆ ರೋಗ ನಿಯಂತ್ರಣಕ್ಕೆ ಶೇ.1ರ ಬೋರ್ಡೋ ದ್ರಾವಣ ಸಿಂಪಡಿಸ ಬಹುದಾಗಿದೆ.

2. ಗಡ್ಡೆ ಕೊಳೆ ರೋಗ

**ರೋಗದ ಲಕ್ಷಣಗಳು**

ರೋಗಕ್ಕೆ ತುತ್ತಾದ ಗಿಡಗಳ ಎಲೆಗಳ ತುದಿ ಭಾಗವು ಹಳದಿ ಬಣ್ಣಕ್ಕೆ ತಿರುಗಿ ಕ್ರಮೇಣ ಎಲೆ ಹಳದಿಯಾಗುತ್ತದೆ. ಆಮೇಲೆ ಗಿಡಗಳು ಬಾಡಿ ಒಣಗುತ್ತವೆ. ಗಿಡದ ಬುಡ ಭಾಗವು ತೇವಾಂಶ ಯುಕ್ತ ಕಂದು ಬಣ್ಣದಿಂದ ಕೂಡಿರುತ್ತದೆ. ಆಮೇಲೆ ಮೃದುವಾಗಿ ನಂತರ ಕೊಳೆಯುತ್ತವೆ.

**ನಿರ್ವಹಣಾ ಕ್ರಮಗಳು**

- ನಾಟಿಗಾಗಿ ರೋಗರಹಿತ ಗಡ್ಡೆಯಲ್ಲಿನ ಆರೋಗ್ಯವಂತ ಗಡ್ಡೆಗಳನ್ನು ಬಳಸುವುದು ಅತಿ ಮುಖ್ಯ.
- ಬೀಜದ ಗಡ್ಡೆಗಳನ್ನು ಶೇಖರಿಸುವ ಮೊದಲು ಶುಂಠಿಯ ಕೊಂಬುಗಳನ್ನು 3 ಗ್ರಾಂ ಮ್ಯಾಂಕೋಜೆಬ್ 75 ಡಬ್ಲ್ಯು.ಪಿ. ಪ್ರತಿ ಲೀಟರ್ ನೀರಿಗೆ ಬೆರೆಸಿ ತಯಾರಿಸಿದ ದ್ರಾವಣದಲ್ಲಿ ಸುಮಾರು 30 ನಿಮಿಷಗಳ ಕಾಲ ನೆನಿಸಬೇಕು. ನಂತರ ನೆರಳಿನಲ್ಲಿ ಹರಡಿ ಆರಲು ಬಿಡಬೇಕು. ನಂತರ ಉಪಚರಿಸಿದ ಬೀಜಗಳನ್ನು ಶೇಖರಿಸಬೇಕು.
- ಗಡ್ಡೆ ಕೊಳೆ ರೋಗದ ತೀವ್ರತೆ ಹೆಚ್ಚಿರುವ ಪ್ರದೇಶಗಳಲ್ಲಿ ಮಾರ್ಚ್ ತಿಂಗಳಲ್ಲಿ ನಾಟಿ ಮಾಡುವುದು ಸೂಕ್ತ.
- ನಾಟಿಗಾಗಿ ಚೆನ್ನಾಗಿ ನೀರು ಬಸಿದು ಹೋಗುವಂತಹ ಭೂಮಿಯನ್ನು ಆಯ್ಕೆ ಮಾಡಬೇಕು.
- ನಾಟಿ ಮಾಡುವ ಮೊದಲು ಬೀಜದ ಗಡ್ಡೆಗಳನ್ನು 6 ಗ್ರಾಂ. ಮೆಟಲಾಕ್ಸಿಲ್ ಎಮ್.ಝಡ್ 72 ಡಬ್ಲ್ಯು.ಪಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ತಯಾರಿಸಿ ದ್ರಾವಣದಲ್ಲಿ 30 ನಿಮಿಷಗಳ ಕಾಲ ನೆನೆಸಿ ನಂತರ ನಾಟಿ ಮಾಡಬೇಕು.

- ನಾಟಿ ಮಾಡುವಾಗ 1 ಕ್ವಿಂಟಾಲ್ ಬೇವಿನ ಹಿಂಡಿ ಜೊತೆಗೆ 1 ಕಿ.ಗ್ರಾಂ. ಟ್ರೈಕೋಡರ್ಮಾ ಜೈವಿಕ ಶಿಲೀಂದ್ರನಾಶಕ ಪ್ರತಿ ಎಕರೆಗೆ ಭೂಮಿಯಲ್ಲಿ ನಾಟಿ ಮಾಡುವಾಗ ಬೆರೆಸಬೇಕು.
- ಶುಂಠಿ ಬೆಳೆಗೆ ನೆರಳು ಒದಗಿಸುವಂತಹ ಎತ್ತರ ಬೆಳೆಗಳಾದ ಔಡಲ ಅಥವಾ ತೊಗರಿ ಬೆಳೆಗಳನ್ನು ಮಿಶ್ರ ಬೆಳೆಯಾಗಿ ತೆಗೆದು ಕೊಳ್ಳಬೇಕು.
- ಶುಂಠಿಯ ಬೆಳೆಯಲ್ಲಿಯ ರೋಗಗ್ರಸ್ಥ ಗಡ್ಡೆಗಳನ್ನು ತಗೆದು ಹಾಕಿ. ನಂತರ ೩ ಗ್ರಾಂ. ಕಾಪರ್ ಆಕ್ಸಿಕ್ಲೋರೈಡ್ 50 ಡಬ್ಲ್ಯೂ.ಪಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ತಯಾರಿಸಿದ ದ್ರಾವಣವನ್ನು ರೋಗ ಬಂದ ಮಡಿಗೆ ಹಾಗೂ ಸುತ್ತಮುತ್ತಲಿನ ಮಡಿಗಳಿಗೆ ಹಾಕಬೇಕು.

**ಕೃಷಿ ವಿಶ್ವ ವಿದ್ಯಾಲಯ ಧಾರವಾಡ**

**ಕೃಷಿ ವಿಜ್ಞಾನ ಕೇಂದ್ರ , ಉತ್ತರ ಕನ್ನಡ, ಶಿರಸಿ**